ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl.NDPS 9/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ ಕೆ.ಬಿ ರಾಮಚಂದ್ರಪ್ಪ | | ಪಿ.ಡಬ್ಲ್ಯೂ | 5 |
| ತಂದೆಯ ಹೆಸರು | ಃ ಬಸಪ್ಪ | | ಸಿ.ಡಬ್ಲ್ಯೂ | 4 |
| ವಯಸ್ಸು | ಃ 54 | ವರ್ಷ | | |
| ಉದ್ಯೋಗ | ಃ ಸೆಕ್ಷನ್ ಆಫೀಸರ್, ವಿಧಾನ ಸೌಧ, ಕಂದಾಯ ಇಲಾಖೆ, ಬೆಂಗಳೂರು | | | |
| ವಾಸ ಸ್ಥಳ | ಃ ಬೆಂಗಳೂರು | | | |

ದಿ 07-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ದಿ.11.10.2019 ರಿಂದ ದಿ.10.05.2022 ರ ವರೆಗೆ ನಾನು ಹರಿಹರ ತಾಲ್ಲೂಕಿನಲ್ಲಿ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಆ ಸಮಯದಲ್ಲಿ ಚಾಸಾ-1 ರವರು ದಿ.12.09.2020 ರಂದು ಪೋಲೀಸ್ ಠಾಣೆಗೆ ನನ್ನನ್ನು ಕರೆಸಿಕೊಂಡು, ಹರಿಹರ ಶಿವಮೊಗ್ಗ ರಸ್ತೆಯ ಹನಗವಾಡಿ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ದಾಳಿ ಮಾಡಬೇಕಾಗಿದೆ ಎಂದು ಪತ್ರಾಂಕಿತ ಅಧಿಕಾರಿ ಬರಬೇಕೆಂದು ನನ್ನನ್ನು ಕೋರಿದ್ದರು.

2. ಅವರ ಕೋರಿಕೆಯ ಮೇರೆಗೆ ಅದೇ ದಿನ ಮಧ್ಯಾಹ್ನ 12.30 ಗಂಟೆಗೆ ನಾನು ಹರಿಹರ ಗ್ರಾಮಾಂತರ ಪೋಲೀಸ್ ಠಾಣೆಗೆ ಭೇಟಿ ನೀಡಿದ್ದೆನು. ಈ ಪ್ರಕರಣದ ಚಾಸಾ-2 ಮತ್ತು 3 ರವರು ಸಹ ನನ್ನೊಂದಿಗೆ ಪಂಚರನ್ನಾಗಿ ಕರೆಸಿ, ಅವರಿಗೆ ಮಾಹಿತಿಯನ್ನು ತಿಳಿಸಿದ್ದರು. ನಂತರ ನಾವುಗಳು,

ಪೋಲೀಸ್ ಸಿಬ್ಬಂದಿಗಳು, ಹರಿಹರ – ಶಿವಮೊಗ್ಗ ರಸ್ತೆಯ ಹನಗವಾಡಿಯ ಬಳಿ ಇಂಡಿಯನ್ ಡಾಬಾ ಬಳಿ ನಿಂತುಕೊಂಡೆವು. ಮರೆಯಲ್ಲಿ ನಾವು ನಿಂತುಕೊಂಡು ನೋಡುತ್ತಿದ್ದೆವು.

3. ಆ ಸಮಯದಲ್ಲಿ ಚಾಸಾ–1 ಮತ್ತು ಪೋಲೀಸ್ ಸಿಬ್ಬಂದಿಗಳು ಭರಣಿ ಹೋಟಲ್ ಮುಂಭಾಗದಲ್ಲಿ ಇದ್ದಂತಹ ಮೂರು ಜನರನ್ನು ಹಿಡಿದುಕೊಂಡರು. ಆ ಮೂವರ ಜೊತೆ ಒಂದು ಆಟೋ ಸಹ ಇತ್ತು, ಅದನ್ನು ವಶಕ್ಕೆ ಪಡೆದುಕೊಂಡರು. ಆ ಸಂದರ್ಭದಲ್ಲಿ ನಾನು ಕೂಡ ಸ್ಥಳಕ್ಕೆ ಭೇಟಿ ಕೊಟ್ಟೆನು. ನಾನು, ಪಂಚರು ಮತ್ತು ಚಾಸಾ–1 ರವರು ಆ ಮೂವರನ್ನು ವಿಚಾರಣೆ ಮಾಡಿದೆವು. ಅವರುಗಳು ತಮ್ಮ ಹೆಸರು ಕ್ರಮವಾಗಿ ರಾಹುಲ್, ಮಲ್ಲಿಕಾರ್ಜುನ ಮತ್ತು ಪ್ರಮೋದ್ ಎಂದು ಹಾಗೂ ತಾವು ಶಿವಮೊಗ್ಗದವರು ಎಂದು ತಿಳಿಸಿದರು.

4. ಅವರನ್ನು ಪರಿಶೀಲಿಸಿದಾಗ, ರಾಹುಲ್ ಮತ್ತು ಮಲ್ಲಿಕಾರ್ಜುನ ಬಳಿ ಎರಡು ಬ್ಯಾಗುಗಳು ಕಂಡು ಬಂದವು. ಬ್ಯಾಗುಗಳನ್ನು ಪರಿಶೀಲನೆ ಮಾಡಿದೆವು. ಆ ಮೂವರಿಗೂ ನೋಟಿಸು ಕೊಟ್ಟೆವು. ನಂತರ ರಾಹುಲ್ ನ ಬ್ಯಾಗನ್ನು ಪರಿಶೀಲನೆ ಮಾಡಿದಾಗ, ಸದರಿ ಬ್ಯಾಗು FASTTRACK ಎಂಬ ಹೆಸರಿನ ಕೆಂಪು ಬಣ್ಣದ್ದಾಗಿತ್ತು. ಸದರಿ ಬ್ಯಾಗುನ್ನು ಪರಿಶೀಲನೆ ಮಾಡಲಾಗಿ, ಒಂದು ಪ್ಲಾಸ್ಟಿಕ್ ಪಾರದರ್ಶಕ ಕವರಿನಲ್ಲಿ ಒಣಗಿದ ಸೊಪ್ಪು, ಬೀಜಗಳು, ಹೂವಿನ ಮೊಗ್ಗುಗಳು ಘಾಟು ವಾಸನೆಯಿಂದ ಕೂಡಿತ್ತು. ಅದು ಗಾಂಜಾ ಎಂದು ಗೊತ್ತಾಯಿತು. ಅವುಗಳನ್ನು ತೂಕ ಮಾಡಲಾಗಿ, ಅದು 2 ಕೆ.ಜಿ. 45 ಗ್ರಾಮ್ ಇತ್ತು. ನಂತರ ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲ್ ಮಾಡಲಾಯಿತು.

5. ಅದೇ ರೀತಿ ಮಲ್ಲಿಕಾರ್ಜುನ ಎಂಬುವನ ಬಳಿ ಇದ್ದ ಬ್ಯಾಗಳನ್ನು ಪರಿಶೀಲಿಸಲಾಗಿ, ಅದು ನೀಲಿ ಬಣ್ಣದ ENO ಬ್ಯಾಗ ಆಗಿತ್ತು. ಸದರಿ ಬ್ಯಾಗಿನಲ್ಲಿ ಪ್ಲಾಸ್ಟಿಕ್ ಕವರಿನಲ್ಲಿ ಗಾಂಜಾ ಇರುವುದು ಕಂಡು ಬಂತು. ಅದನ್ನು ತೂಕ ಮಾಡಲಾಗಿ, ಅದು 2 ಕೆ.ಜಿ. 45 ಗ್ರಾಂ ಇತ್ತು . ಅದನ್ನು ಸಹ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಲಾಯಿತು.

6. ಅದೇ ರೀತಿ ಪ್ರಮೋದ್ ನ ಅಂಗಶೋಧನೆ ಮಾಡಲಾಗಿ, ಆತನ ಪ್ಯಾಂಟಿನ ಬಲ ಒಳ ಜೇಬಿನಲ್ಲಿ 11 ಪ್ಲಾಸ್ಟಿಕ್ ಕವರುಗಳು ಇದ್ದು, ಅವುಗಳಲ್ಲಿಯೂ ಕೂಡ ಗಾಂಜಾ ಕಂಡು ಬಂದಿತು. ಅವುಗಳನ್ನು ಒಟ್ಟು ತೂಕ ಮಾಡಲಾಗಿ ಒಟ್ಟು 80 ಗ್ರಾಂ ಇತ್ತು. ಮತ್ತು ಆತನ ಪ್ಯಾಂಟಿನ ಎಡ ಒಳ ಜೇಬಿನಲ್ಲಿ 23 ಸಣ್ಣ ಪ್ಲಾಸ್ಟಿಕ್ ಕವರುಗಳು ಕಂಡು ಬಂದವು. ಅವುಗಳನ್ನು ಸಹ ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲ್ ಮಾಡಲಾಯಿತು. ಸದರಿ ಸಣ್ಣ ಪ್ಲಾಸ್ಟಿಕ್ ಕವರುಗಳನ್ನು ಅವುಗಳಲ್ಲಿ ಗಾಂಜಾ ಹಾಕಿ ಮಾರಾಟ ಮಾಡಲು ಉಪಯೋಗಿಸುವುದಾಗಿ ತಿಳಿಸಿದರು.

7. ವಶಕ್ಕೆ ಪಡೆದ ಆಟೋ ಕಪ್ಪು ಬಣ್ಣದ್ದಾಗಿದೆ. ಅದರ ನಂ.ಕೆಎ–14 ಬಿ–8176 ಆಗಿದೆ. ಇವೆಲ್ಲವುಗಳನ್ನೂ ಮಧ್ಯಾಹ್ನ 1.30 ರಿಂದ 3.15 ರ ವರೆಗೆ ನಿಪಿ–2 ರಂತೆ ಪಂಚನಾಮೆ ಬರೆದು ವಶಕ್ಕೆ ಪಡೆದುಕೊಳ್ಳಲಾಯಿತು. ನಿಪಿ–2 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ, ಗುರುತಿಸಿದ್ದರಿಂದ, ಈ ಸಾಕ್ಷಿಯ ಸಹಿಯನ್ನು **ನಿಪಿ–2(ಸಿ)** ಎಂದು ಗುರುತಿಸಲಾಯಿತು. ನಿಪಿ–2 ರ ಪಂಚನಾಮೆ ಬರೆಯುವಾಗ ನಿಪಿ–3 ರಿಂದ ನಿಪಿ–12 ರಂತೆ ಪೋಟೋಗಳನ್ನು ತೆಗೆಯಲಾಯಿತು. ನಿಪಿ–3 ರ ಪೋಟೋದಲ್ಲಿ ಸಾಕ್ಷಿಯು ಮೂವರು ಆರೋಪಿತರು ಕುಳಿತಿದ್ದಾರೆಂದು ಸಾಕ್ಷಿಯು ನೋಡಿ, ಗುರುತಿಸಿರುತ್ತಾರೆ. ನಿಪಿ–3 ರಲ್ಲಿ ಆಟೋ ಇರುವುದು ಕಂಡು ಬರುತ್ತದೆ.

8. ನ್ಯಾಯಾಲಯದಲ್ಲಿ ಹಾಜರುಪಡಿಸಿದ ಈಗಾಗಲೇ ಎಂ.ಓ.1 ರಿಂದ ಎಂ.ಓ.7 ಎಂದು ಗುರುತಿಸಲಾದ ಮುದ್ದೆಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಆರೋಪಿ 1 ರಿಂದ 3 ರವರೆಗೆ ಅಂಗಶೋಧನೆ ಮಾಡುವ ಬಗ್ಗೆ ಜಾರಿ ಮಾಡಲಾದ ನೊಟೀಸುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ–13 ರಿಂದ 15 ಎಂದು ಗುರುತಿಸಲಾಯಿತು. ನನ್ನ ಸಹಿಗಳನ್ನು ನಿಪಿ–13(ಎ) ದಿಂದ 15(ಎ) ಅಂತ ಗುರುತಿಸಲಾಯಿತು. ಇಬ್ಬರು ಆರೋಪಿತರನ್ನು ವಿಸಿ ಮೂಲಕ ನೋಡಿ ಹಾಗೂ ನ್ಯಾಯಾಲಯದ ಮುಂದೆ ಇರುವ ಒಬ್ಬ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. (ಮೂಲ ಪ್ರತಿಗಳನ್ನು

Spl.C.NDPS.9/2020 ರಲ್ಲಿ ಇರುವುದನ್ನು ಸಾಕ್ಷಿದಾರರು ನೋಡಿ ಗುರುತಿಸುತ್ತಾರೆ. ಈ ರೀತಿ ಗುರುತಿಸಿರುವ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇಲ್ಲ ಅಂತ ನುಡಿದಿರುತ್ತಾರೆ.)

**ಪಾಟೀ ಸವಾಲು ಃ ಶ್ರೀ ಕೆ.ಕೆ. (ಎಲ್.ಎ.ಡಿ.ಸಿ.) ವಕೀಲರಿಂದ 3 ನೇ ಆರೋಪಿತರ ಪರವಾಗಿಃ**

9. ನಿಪಿ-15 ರಲ್ಲಿ "ನಾನು ಶೋಧನೆ ಮಾಡಬಹುದಾ ಅಥವಾ ಪತ್ರಾಂಕಿತ ಅಧಿಕಾರಿ ಶೋಧನೆ ಮಾಡಬೇಕೇ" ಎಂದು ನಮೂದಾಗಿದೆ ಅಂದರೆ ನಿಜ. ಆ ನೋಟಿಸ್ಸನ್ನು ತಾಲ್ಲೂಕು ಮ್ಯಾಜೇಸ್ಟ್ರೇಟ್ ಆಗಿ ಕೊಟ್ಟಿದ್ದೇನೆ ಅಂದರೆ ನಿಜ. ಆರೋಪಿಯು ಪತ್ರಾಂಕಿತ ಅಧಿಕಾರಿಗಳ ಸಮಕ್ಷಮದಲ್ಲಿ ಅಗ ಶೋಧನೆ ಮಾಡಬೇಕು ಅಂತ ಒಪ್ಪಿದ್ದರು ಅಂದರೆ ನಿಜ. ನಿಪಿ-15 ರಲ್ಲಿ ನನ್ನ ಸಹಿ ಇದೆ ಆದರೆ ಹುದ್ದೆಯನ್ನು ನಮೂದು ಮಾಡಿಲ್ಲ ಅಂದರೆ ನಿಜ. ನಿಪಿ-15 ರಲ್ಲಿ ಸಮಯವನ್ನು ನಮೂದು ಮಾಡಿಲ್ಲ ಅಂದರೆ ನಿಜ.

10. ಹರಿಹರದಿಂದ ಅನಗವಾಡಿ ಕ್ರಾಸ್ ಮತ್ತು ಹರ ಮಠ ಎರಡು ಬದಿಯಲ್ಲಿ ಸಾಕಷ್ಟು ವಾಣಿಜ್ಯ ಮಳಿಗೆಗಳು ಮತ್ತು ಪೆಟ್ರೋಲ್ ಬಂಕ್ ಗಳು ಇವೆ ಅಂದರೆ ನಿಜ. ಅದು ಜನನಿಬೀಡ ಪ್ರದೇಶ ಅಂದರೆ ನಿಜ. ಆದ್ದರಿಂದ ಅಲ್ಲಿ ಆ ಅಂಗಡಿಗಳೆಲ್ಲಾ ಅಥವಾ ರಸ್ತೆಯಲ್ಲಿ ಸಿಸಿಟಿವಿ ಅಳವಡಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಶಿವಮೊಗ್ಗ ಕಡೆ ಬಂದರೆ ಸಾಕಷ್ಟು ಅಂಗಡಿಗಳು ಕನಕ ಗುರುಪೀಠ ಮಠ, ಸಾಕಷ್ಟುಪೆಟ್ರೋಲ್ ಬಂಕ್ ಗಳು ಇವೆ ಅಂದರೆ ನಿಜ. ಅಲ್ಲಿ ಸಹ ಸಿಸಿಟಿವಿ ಅಳವಡಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಅಲ್ಲಿಯಾವಾಗಲೂ ಪೊಲೀಸರು ಗಸ್ತು ಸಂಚರಿಸುತ್ತಾರೆ ಅಂದರೆ ನಿಜ. ನಾವು ಯಾರೂ ID card ಧರಿಸಿಲ್ಲ ಅಂದರೆ ನಿಜ. ಹೋಟೆಲ್ ನ ಕಾನೆಶುಮಾರಿ ನಂಬರ ನನಗೆ ಗೊತ್ತಿಲ್ಲ ಅಂದರೆ ನಿಜ. ಅದು ಯಾವ ಸರ್ವೆ ನಂಬರನಲ್ಲಿತ್ತು ಮತ್ತು ಅದರ ಮಾಲೀಕರು ಯಾರು ಅಂತ ನನಗೆ ಗೊತ್ತಿಲ್ಲ. ಅದು ಭರಣಿ ಹೋಟೆಲ್ ಅಂತ ತೋರಿಸಲು ಯಾವುದೇ ಗುರುತು ಇಲ್ಲ ಅಂದರೆ ಅಲ್ಲಿ ಭರಣಿ ಹೋಟೆಲ್ ಇದೆ ಆದರೆ ಪೋಟೋದಲ್ಲಿ ಕಾಣುವುದಿಲ್ಲ. ಅಲ್ಲಿ ಭರಣಿ ಹೋಟೆಲ್ ಇಲ್ಲ ಮತ್ತು ಇಂಡಿಯನ್ ಡಾಬಾ ಇಲ್ಲ ಅಂದರೆ ಸರಿಯಲ್ಲ. ಪೊಲೀಸರು ಪೋಟೋಗಳನ್ನು ಸೃಷ್ಟಿ ಮಾಡಿದ್ದಾರೆ ಅಂದರೆ ಸರಿಯಲ್ಲ.

11. ಗಾಂಜಾ ಸೊಪ್ಪು ಅಂತ ಹೇಳಲಾದ ಸೊಪ್ಪಿನಲ್ಲಿ ಎಷ್ಟು ಬೇರು, ಕಾಂಡ ಇತ್ತು ಅಂತ ಹೇಳಲಾಗುವುದಿಲ್ಲ. ಅಮಾನತ್ತುಪಡಿಸಿಕೊಂಡಿರುವ ವಸ್ತುಗಳು ಯಾವು ಗಾಂಜಾ ಅಲ್ಲ ಅಂದರೆ ಅದರಲ್ಲಿ ಗಾಂಜಾ ಇದ್ದ ಬಗ್ಗೆ ಲಕ್ಷಣ ಇತ್ತು. ಅಲ್ಲಿ ಯಾವುದೇ ವಿಡಿಯೋಗ್ರಾಫಿ ಮಾಡಿದ್ದಾರೋ ಇಲ್ಲವೋ ನೆನಪಿಲ್ಲ. ಅಲ್ಲಿ ನಕ್ಷೆ ಸಹ ತಯಾರಿಸಿಲ್ಲ ಅಂದರೆ ನೆನಪಿಲ್ಲ. ಸ್ಯಾಂಪಲ್ ಸೀಲ್ ಯಾರ ವಶದಲ್ಲಿತ್ತು ಅಂದರೆ ಪೊಲೀಸ್ ಸಿದ್ದರಾಜು ಬಳಿ ಇತ್ತು. ನನ್ನ ಸಮಕ್ಷಮ ಅರೆಸ್ಟ್ ಪಾರ್ಮ್, Chain custody form, ನ್ನು ತಯಾರಿಸಿಲ್ಲ. ಹರಿಹರದಲ್ಲಿ ಆರೋಗ್ಯ ಮಾತೆ ಚರ್ಚ್ ಇದೆ ಅಂದರೆ ನಿಜ. ಅದು ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧವಾದ ಚರ್ಚ ಅಂದರೆ. 3 ನೇ ಆರೋಪಿಯು ಆ ದಿನ ಚರ್ಚ್‌ಗೆ ಬಂದಿದ್ದು, ಪೊಲೀಸರು ಆತನನ್ನು ದಸ್ತಗಿರಿ ಮಾಡಿ, ಆತನ ವಿರುದ್ಧ ಸುಳ್ಳು ಕೇಸ್ ದಾಖಲು ಮಾಡಿದ್ದಾರೆ ಅಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಮದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

**ಪಾಟೀ ಸವಾಲು ಃ 1 ಮತ್ತು 2 ನೇ ಆರೋಪಿತರ ಪರವಾಗಿಃ**

3 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.